KACM010009572024

Presented on : 04-04-2024
Registered on : 04-04-2024

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**Presided Over by RAJESHWARI N. HEGDE**
**Com.O.S./18/2024**

Plaintiff:
K. Vasudeva
Address: K. Vasudeva S/o Late Kempaiah, 59 years, R/o Margada Camp, Birur Town, Kadur.

VERSUS

Defendant:
T. EshwarappaS/o K.T. Thimmaiah, 62 years, Proprietor, Sri. Anjaneya Traders, Udeva villat and post, Lingadahali hobli, Tarikere.

-----------------------------------------------------------------------------------------

Advocate for Plaintiff: K.H.Mallikarjuna
Advocate for Defendant: D.R. CHARAN

---

**ದಿನಾಂಕಃ 09-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರಃ ಶ್ರೀ ಕೆ .ಹೆಚ್.ಎಂ. ವಕೀಲರಿಂದಃ**

1. ನಾನು ಬಿ ಎ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಇಂಗ್ಲೀಷ್ ಓದಲು ಬರುತ್ತದೆ, ಆದರೆ ಸರಿಯಾಗಿ ಅರ್ಥ ಮಾಡಿಕೊಳ್ಳಲು ಬರುವುದಿಲ್ಲ. ಕಳೆದ 5-6 ವರ್ಷಗಳಿಂದ ನನಗೆ ಸರಿಯಾಗಿ ಅರ್ಥ ಮಾಡಿಕೊಳ್ಳಲು ಬರುವುದಿಲ್ಲ ಎಂದು ಹೇಳುತ್ತಾರೆ.

2. ನನ್ನ ಊರು ಉಡೇವಾ ಗ್ರಾಮ, ತರೀಕೆರೆ ತಾಲ್ಲೂಕು. ಸದರಿ ಉಡೇವಾ ಗ್ರಾಮದಲ್ಲಿ ನನಗೆ ಸೇರಿದ ಆಂಜನೇಯ ಟ್ರೇಡರ್ಸ್ ಎಂಬ ಹೆಸರಿನ ಕೀಟನಾಶಕ ಮತ್ತು ಗೊಬ್ಬರದ ಅಂಗಡಿ ಇದೆ. ಸದರಿ ಅಂಗಡಿಗೆ ನಾನು ಪ್ರೊಪರೈಟರ್ ಆಗಿರುತ್ತೇನೆ. ಸದರಿ

ಟ್ರೇಡರ್ಸ್ ನ್ನು ನಾನು 2014 ರಿಂದ 2020 ರವರೆಗೆ ನಡೆಸಿರುತ್ತೇನೆ. 2020 ರಲ್ಲಿ ನನಗೆ ಹೃದಯಕ್ಕೆ ತೊಂದರೆಯಾಗಿದ್ದರಿಂದ ಸದರಿ ಟ್ರೇಡರ್ಸ್‌ನ್ನು ನಿಲ್ಲಿಸಿರುತ್ತೇನೆ.

3. 2020 ರಲ್ಲಿ ನನಗೆ ಹೃದಯ ಖಾಯಿಲೆ ಬಂದಿದ್ದರ ಬಗ್ಗೆ ನನ್ನ ಬಳಿ ದಾಖಲೆ ಇರುತ್ತದೆ. ನನಗೆ ಜಮೀನು ಇದೆ. ಸದರಿ ಜಮೀನಿಗೆ ನೀರಾವರಿ ಸೌಲಭ್ಯ ಇದೆ ಎಂದರೆ ಸರಿಯಲ್ಲ. ಟ್ರೇಡರ್ಸ್ ಬ್ಯುಸಿನೆಸ್ ಜೊತೆ ಸದರಿ ಜಮೀನಿನ ಕೆಲಸವನ್ನು ನಾನು ಮಾಡಿಕೊಂಡಿದ್ದೆ ಎಂದರೆ ಸರಿ.

4. ವಾದಿಯು ನನಗೆ 25-30 ವರ್ಷಗಳಿಂದ ಪರಿಚಯ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು 2015 ನೇ ಇಸ್ವಿಯಿಂದ ಪರಿಚಯ ಎಂದು ಹೇಳುತ್ತಾರೆ. ನನಗೂ ಹಾಗೂ ವಾದಿಗೂ ಹಣ ತೆಗೆದುಕೊಳ್ಳುವುದು-ಕೊಡುವುದು ವ್ಯವಹಾರ ಇದ್ದು, ನಮ್ಮಿಬ್ಬರಲ್ಲೂ ವಿಶ್ವಾಸ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸ್ವತಃ ನುಡಿದಿದ್ದಾರೆ ವಾದಿಯದೂ ಸಹಾ ಕೀಟನಾಶಕ ಮತ್ತು ಗೊಬ್ಬರದ ಅಂಗಡಿ ಇದ್ದು, ಸದರಿ ಅಂಗಡಿಯಲ್ಲಿ ನಾನು ಸಾಮಗ್ರಿಗಳನ್ನು ಖರೀದಿಸಿ, ಅದರ ಬಾಬ್ತು ಹಣವನ್ನು ಕೊಡುತ್ತಿದ್ದೆ ಎಂದು ಹೇಳುತ್ತಾರೆ.

5. ನನಗೆ ತರೀಕೆರೆ ತಾಲ್ಲೂಕು ಬಿ.ಹೆಚ್.ರೋಡ್ ಲಕ್ಷ್ಮಿವೆಂಕಟೇಶ್ವರ ಕಾಂಪ್ಲೆಕ್ಸ್ ನಲ್ಲಿ ಇರುವ ಎಸ್ ಬಿ ಐ ಬ್ಯಾಂಕಿನಲ್ಲಿ ಖಾತೆ ಇದೆ ಎಂದರೆ ಸರಿ. ನಿ.ಪಿ.1 ಎಂದು ಗುರುತಿಸಲಾದ ಚೆಕ್ ಸದರಿ ನನ್ನ ಖಾತೆಗೆ ಸಂಬಂಧಿಸಿದ್ದು ಎಂದರೆ ಸರಿ. ನಿ.ಪಿ.1 ರಲ್ಲಿರುವ ಸಹಿ ನನ್ನದು ಎಂದರೆ ಸರಿ. ಸದರಿ ಚೆಕ್ ನ ಬಗ್ಗೆ ನಾನು ಬ್ಯಾಂಕಿಗೆ stop payment ಕೊಟ್ಟಿದ್ದೆ ಎಂದರೆ ಸರಿ. ನನ್ನ ನಿರ್ದೇಶನದಂತೆ ಸದರಿ ಚೆಕ್ ನ್ನು stop payment ಮಾಡಿದ್ದಾರೆ ಎಂದರೆ ಸರಿ.

6. ಇದಾದ ನಂತರ ವಾದಿಯು ನನಗೆ ವಕೀಲರ ಮೂಲಕ ನಿ.ಪಿ.6 ರಂತೆ ನೋಟೀಸು ಕೊಟ್ಟಿದ್ದಾರೆ ಎಂದರೆ ಸರಿ. ಸದರಿ ನೋಟೀಸನ್ನು ನಾನು ಸ್ವೀಕರಿಸಿರುತ್ತೇನೆ

ಎಂದರೆ ಸರಿ. ನಿ.ಪಿ.7 ಎಂದು ಗುರುತಿಸಲಾದ ಸ್ವೀಕೃತಿಯಲ್ಲಿ ಇರುವ ಸಹಿ ತನ್ನದೇ ಎಂದು ಸಾಕ್ಷಿಯು ಹೇಳಿರುತ್ತಾರೆ.

7. ನಿ.ಪಿ.6 ರ ನೋಟೀಸಿಗೆ ನಾನು ನನ್ನ ವಕೀಲರ ಮೂಲಕ reply ಕೊಟ್ಟಿದ್ದೇನೆ ಎಂದರೆ ಸರಿ. Reply ನೋಟೀಸ್ ಕೊಡಲು ನನ್ನ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. Reply ನೋಟೀಸ್ ನಲ್ಲಿ ಏನು ಬರೆಸಿರುತ್ತೇನೆ ಎನ್ನುವ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ.

8. ನಿ.ಪಿ.12 ಎಂದು ಗುರುತಿಸಲಾದ ದಾಖಲೆ ನನಗೆ ಸೇರಿದ ಆಂಜನೇಯ ಟ್ರೆಡರ್ಸ್ ಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ. ಸದರಿ ದಾಖಲೆ ದಿನಾಂಕಃ 15-08-2019 ರಿಂದ ಪ್ರಾರಂಭವಾಗಿದೆ ಎಂದು ನಮೂದು ಇದೆ ಎಂದರೆ ಸರಿ.

9. ನನಗೆ ಶ್ರೀ ಆಂಜನೇಯ ಟ್ರೇಡರ್ಸ್ ಎಂಬ ಇನ್ನೊಂದು ಅಂಗಡಿ ಇದೆ ಎಂದರೆ ಸರಿಯಲ್ಲ. ಮೊದಲಿಗೆ ಆಂಜನೇಯ ಟ್ರೇಡರ್ಸ್ ಎಂದು ಲೈಸೆನ್ಸ್ ತೆಗೆದುಕೊಂಡು, ನಂತರದಲ್ಲಿ ಶ್ರೀ ಆಂಜನೇಯ ಟ್ರೇಡರ್ಸ್ ಎಂದು ಇನ್ನೊಂದು ಲೈಸೆನ್ಸ್ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

10. ತಿಮ್ಮಯ್ಯ ಈಶ್ವರಪ್ಪ ಎಂದರೆ ನಾನೇ ಆಗಿರುತ್ತೇನೆ. ಮೇಲೆ ಹೇಳಿದ ಎರಡೂ ಟ್ರೇಡರ್ಸ್ ಗಳೂ ಕೂಡ ಅಸ್ತಿತ್ವದಲ್ಲಿ ಇವೆ ಎಂದರೆ ಸರಿಯಲ್ಲ. ಎರಡನೇ ಟ್ರೇಡರ್ಸ್ ಅಂದರೆ ಶ್ರೀ ಆಂಜನೇಯ ಟ್ರೇಡರ್ಸ್ ಬಗ್ಗೆ ಜಿ ಎಸ್ ಟಿ ಪತ್ರ ಪಡೆಯಲು ಮೊದಲನೇ ಟ್ರೇಡರ್ಸ್ ಬಗ್ಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ತನಗೆ ಇರುವುದು ಒಂದೇ ಟ್ರೇಡರ್ಸ್ ಎಂದು ಹೇಳುತ್ತಾರೆ.

11. 2019 ನೇ ಇಸ್ವಿಯಲ್ಲಿ ಶ್ರೀ ಆಂಜನೇಯ ಟ್ರೇಡರ್ಸ್ ಎಂಬ ಹೆಸರಿನಲ್ಲಿ ಅಂಗಡಿ ನಡೆಸುತ್ತಿದ್ದು, ತದ ನಂತರದಲ್ಲಿ ಆಂಜನೇಯ ಟ್ರೇಡರ್ಸ್ ಎಂಬ ಹೆಸರಿನಲ್ಲಿ

ಜಿ.ಎಸ್.ಟಿ. ಪಡೆದಿದ್ದೇನೆ ಎಂದರೆ ಸರಿಯಲ್ಲ. ಎರಡೂ ಟ್ರೇಡರ್ಸ್ ಗಳೂ ನನಗೆ ಸಂಬಂಧಿಸಿದ್ದರೂ ಸಹಾ ಒಂದೇ ಟ್ರೇಡರ್ಸ್ ಇರುವುದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ಕೀಟ ನಾಶಕ ಮತ್ತು ಗೊಬ್ಬರದ ಅಂಗಡಿ ತೆರೆದು ವ್ಯಾಪಾರ ಮಾಡಲು ವಾಣಿಜ್ಯ ಇಲಾಖೆಯವರ ಅನುಮತಿ ಪಡೆಯಬೇಕು ಎಂದರೆ ಸರಿ. ಸದರಿ ಅನುಮತಿ ಆಧಾರದ ಮೇರೆಗೆ ಅಂಗಡಿಯಲ್ಲಿ ಗೊಬ್ಬರ ಮಾರಾಟ ಮಾಡಲು ತರೀಕೆರೆ ಕೃಷಿ ಕಛೇರಿಯಲ್ಲಿ ಲೈಸೆನ್ಸ್ ಪಡೆಯಬೇಕು ಎಂದರೆ ಸರಿ. ಕ್ರಿಮಿನಾಶಕ ವ್ಯಾಪಾರ ಮಾಡಲು ಜಂಟಿ ನಿರ್ದೇಶಕರು ಕೃಷಿ ಇಲಾಖೆ ಚಿಕ್ಕಮಗಳೂರು ಇವರಿಂದ ಲೈಸೆನ್ಸ್ ಪಡೆಯಬೇಕು ಎಂದರೆ ಸರಿ.

13. ಗೊಬ್ಬರ ಮಾರಾಟ ಮಾಡುವ ಲೈಸೆನ್ಸ್ ಮತ್ತು ಕೀಟನಾಶಕ ವ್ಯಾಪಾರ ಮಾಡುವ ಲೈಸೆನ್ಸ್ ಎರಡೂ ಲೈಸೆನ್ಸ್ ರದ್ದಾದಲ್ಲಿ ಮಾತ್ರ ಜಿ ಎಸ್ ಟಿ ಪತ್ರ ರದ್ದಾಗುತ್ತದೆ ಎಂದರೆ ಸರಿ.

14. ಗೊಬ್ಬರ ಮಾರಾಟ ಮಾಡುವ ಲೈಸೆನ್ಸ್ ಮತ್ತು ಕೀಟನಾಶಕ ವ್ಯಾಪಾರ ಮಾಡುವ ಲೈಸೆನ್ಸ್ ಎರಡೂ ಲೈಸೆನ್ಸ್ ಗಳನ್ನೂ ರದ್ದುಪಡಿಸುವಂತೆ ನಾನು ಸಂಬಂಧಿಸಿದ ಇಲಾಖೆಗೆ ಅರ್ಜಿ ಕೊಟ್ಟಿದ್ದೆ. ಸದರಿ ಅರ್ಜಿಯನ್ನು ಯಾವ ದಿನಾಂಕದಂದು ಕೊಟ್ಟಿದ್ದೆ ಎಂದು ಈಗ ಹೇಳಲು ಆಗುವುದಿಲ್ಲ. ಸದರಿ ಮೂರು ಲೈಸೆನ್ಸ್ ರದ್ದು ಪಡಿಸಲು ಕೊಟ್ಟ ಅರ್ಜಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

15. Commercial Tax, GST -ಇವುಗಳ ಬಗ್ಗೆ ನನಗೆ 2015 ರಿಂದಲೂ ಅನುಭವ ಇದೆ ಎಂದರೆ ಸರಿ. ಅವುಗಳನ್ನು ಪಡೆಯಲು ಯಾವ ಯಾವ ತಿಂಗಳಿನಲ್ಲಿ ಅರ್ಜಿ ಸಲ್ಲಿಸಬೇಕೆಂಬ ಬಗ್ಗೆಯೂ ನನಗೆ ಮಾಹಿತಿ ಇದೆ ಎಂದರೆ ಸರಿ.

16. ವಾದಿಯು ಚನ್ನಕೇಶವ ಇನ್ವೆಸ್ಟ್ ಮೆಂಟ್ ಮೂಲಕ ಸಾಲ ಕೊಡುತ್ತಾರೆ ಮತ್ತು ವೈಯುಕ್ತಿಕವಾಗಿಯೂ ಸಹಾ ಸಾಲ ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಪ್ರಕರಣದ ಸಾಲ ನನಗೆ ವಾದಿಯು ಕೊಟ್ಟ ವೈಯುಕ್ತಿಕ ಸಾಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ವೈಯುಕ್ತಿಕವಾಗಿ ನಾನು ವಾದಿಯಿಂದ ರೂ.10,000/-ಗಳು ಮಾತ್ರ ಸಾಲ ಪಡೆದಿದ್ದೆ ಎಂದರೆ ಸರಿ. ಸದರಿ ರೂ.10,000/-ಗಳ ಸಾಲವನ್ನು ನಾನು 2015 ರಲ್ಲಿ ತೆಗೆದುಕೊಂಡಿದ್ದೆ. ಸದರಿ ಸಾಲವನ್ನು ಯಾವ ಉದ್ದೇಶಕ್ಕೆ ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ತನ್ನ ಹೆಂಡತಿಗೆ ಹುಷಾರಿರಲಿಲ್ಲ, ಮನೆಯಲ್ಲಿ ಕಷ್ಟ ಇತ್ತು ಎಂದು ತೆಗೆದುಕೊಂಡಿದ್ದೆ ಎಂದು ಹೇಳುತ್ತಾರೆ.

17. ಸದರಿ ಸಾಲದ ಹಣವನ್ನು 2016 ನೇ ಇಸ್ವಿಯಲ್ಲಿಯೇ ವಾಪಾಸ್ ಕೊಟ್ಟಿರುತ್ತೇನೆ. 2016 ನೇ ಇಸ್ವಿಯಲ್ಲಿ ಸಾಲವನ್ನು ಮರು ಪಾವತಿ ಮಾಡಿದ್ದೇನೆಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. 2016 ರಲ್ಲಿ ವಾದಿಗೆ ಸದರಿ ಹಣವನ್ನು ಮರು ಪಾವತಿ ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. 2015 ರಿಂದ ವಾದಿಯು ಸದರಿ ಚೆಕ್ ನ್ನು ನನಗೆ ವಾಪಾಸ್ ಕೊಟ್ಟಿಲ್ಲ ಎಂಬ ಬಗ್ಗೆ ನಾನು ವಾದಿಯ ವಿರುದ್ಧ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ಪ್ರಕರಣವನ್ನು ಹೂಡಿಲ್ಲ.

19. ಈ ಪ್ರಕರಣಕ್ಕೆ ಸಂಬಂಧಿಸಿದ ಚೆಕ್ ನಾನು ಹೇಳಿದಂತೆ 2015 ನೇ ಇಸ್ವಿಗೆ ಸಂಬಂಧಿಸಿದ್ದಲ್ಲ, ಸದರಿ ಚೆಕ್ 2021 ರಲ್ಲಿ ಕೊಟ್ಟ ಚೆಕ್ ಎಂದರೆ ಸರಿಯಲ್ಲ. ನನಗೆ ವ್ಯವಹಾರಕ್ಕೆ ಬೇಕಾಗಿದ್ದರಿಂದ ದಿನಾಂಕಃ 01-12-2021 ರಂದು ನಾನು ವಾದಿಯಿಂದ ರೂ. 10,00,000/-ಗಳ ಹಣವನ್ನು ಸಾಲ ಪಡೆದು, ಸದರಿ ಹಣದ ಭದ್ರತೆಗಾಗಿ ದಿನಾಂಕಃ 14-03-2022 ಎಂದು ದಿನಾಂಕ ನಮೂದಿಸಿ ನಿ.ಪಿ.1 ಎಂದು ಗುರುತಿಸಲಾದ ಚೆಕ್‌ನ್ನು ವಾದಿಗೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಚೆಕ್ ದಿನಾಂಕಃ 14-03-2022 ರಂದು

ನಗದೀಕರಣ ಆಗುತ್ತದೆ ಎಂದು ನಾನು ಹೇಳಿದ್ದೆ ಎಂದರೆ ಸರಿಯಲ್ಲ.

20. ವಾದಿಗೆ ಸದರಿ ಚೆಕ್ ನ್ನು ಕೊಟ್ಟು ಉದ್ದೇಶಪೂರ್ವಕವಾಗಿ ಬ್ಯಾಂಕಿಗೆ stop payment ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಚೆಕ್ 2021 ನೇ ಇಸ್ವಿಯ ವ್ಯವಹಾರಕ್ಕೆ ಸಂಬಂಧಿಸಿದ್ದಾಗಿದ್ದು, 2015 ನೇ ಇಸ್ವಿಗೆ ಸಂಬಂಧಿಸಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

21. ನಿ.ಡಿ.1 ಎಂದು ಗುರುತಿಸಲಾದ ಜಿ ಎಸ್ ಟಿ / ಪರವಾನಗಿ ರದ್ದಾಗಿದೆ ಎಂದು ಕೊಡಲ್ಪಟ್ಟ ದಾಖಲೆಗೆ ನಾನು ಕೊಟ್ಟ ಅರ್ಜಿಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ದಾಖಲೆಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

22. ನನ್ನ ಪರವಾನಗಿಯನ್ನು ರದ್ದುಪಡಿಸುವ ಬಗ್ಗೆ ತರೀಕೆರೆ Commercial Tax Officer ಮತ್ತು ಜಂಟಿ ಕೃಷಿ ನಿರ್ದೇಶಕರಿಗೂ ಸಹಾ ನಾನು ಅರ್ಜಿ ಕೊಟ್ಟಿದ್ದೆ. ಸದರಿ ದಾಖಲೆಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

23. ನಿ.ಪಿ.1 ಚೆಕ್ ನ್ನು 2021 ರಲ್ಲಿ ಕೊಟ್ಟಿದ್ದರೂ ಸಹಾ ಸದರಿ ಚೆಕ್ 2015 ರಲ್ಲಿ ಕೊಟ್ಟ ಚೆಕ್ ಎಂದು ವಾದಿಗೆ ಕೊಡಬೇಕಾಗಿರುವ ಹಣವನ್ನು ಕೊಡದೆ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಈ ದಾವಾದಲ್ಲಿ ಕೇಳಿರುವ ಪರಿಹಾರ ಕೊಡಲು ನಾನು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ
(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓ.ಹೇ.ಕೇ.ಸ.ಇ.ಎ.ಒ.

Sd/-09-03-2026
(ರಾಜೇಶ್ವರಿ ಎನ್ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿ:-
ಚ

Visit **ecourts.gov.in** for updates or download mobile app “**eCourts Services**” from Android or iOS